ದಿ: 23-01-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಶ್ರೀ ಜಿ.ಎಸ್.ಕೆ.ಎಸ್. ವಕೀಲರಿಂದ :**

ದಿನಾಂಕ 10-08-2021 ರಂದು ಕೊಪ್ಪಳದಲ್ಲಿ ನನ್ನ ಮತ್ತು ಪ್ರತಿವಾದಿಯ ನಡುವೆ ಮಾತುಕತೆಯಾಗಿರುತ್ತದೆ. ಆ ಸಂದರ್ಭದಲ್ಲಿ ಕರಾರಿನಲ್ಲಿ ಕಾಣಿಸಿದ ಇಬ್ಬರು ಸಾಕ್ಷಿದಾರರುಗಳು ಮಧ್ಯವರ್ತಿಗಳಾಗಿದ್ದರು. ಒಂದು ವರ್ಷದ ನಂತರ ಖರೀದಿಸಲು ಮಾತುಕತೆಯಾಗಿತ್ತು. ಆ ಸಂದರ್ಭದಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆ ನೋಡಿದ್ದೇನೆ. ದಾವಾ ಸ್ವತ್ತು ಭೂಪರಿವರ್ತನೆಯಾಗಿ ಏಕವಿನ್ಯಾಸ ಸ್ವತ್ತಾಗಿತ್ತು ಎಂದರೆ ಸರಿ. ಹಾಗೇ ದಾವಾ ಸ್ವತ್ತು ನಮೂನೆ 9 ಮತ್ತು 11 ಎ ರಲ್ಲಿ ದಾಖಲಾಗಿತ್ತು ಎಂದರೆ ಸರಿ. ಮಾತುಕತೆಯಾಗುವಾಗ ಮೇಲೆ ಹೇಳಿದ ಎಲ್ಲಾ ದಾಖಲೆಗಳು ಇದ್ದವು. ಕ್ರಯ ದಸ್ತಾವೇಜು ನೊಂದಣಿಯಾಗಲು ಮೇಲೆ ಹೇಳಿದ ದಾಖಲೆಗಳು ಸಾಕಾಗುತ್ತಿತ್ತು ಎಂದರೆ ಸರಿ. ಆದರೂ ಒಂದು ವರ್ಷದ ಅವಧಿಯನ್ನು ಪ್ರತಿವಾದಿ ಕ್ರಯಪತ್ರ ಮಾಡಿಕೊಡಲು ಕೇಳಿರುತ್ತಾರೆ. ಮಾತುಕತೆಯಾಗುವ ಸಮಯದಲ್ಲಿ ಯಾವುದೇ ಮುಂಗಡ ಹಣ ನೀಡಿಲ್ಲ, ಯಾವುದೇ ಕರಾರು ಮಾಡಿಕೊಂಡಿಲ್ಲ. ಆದರೆ ಸದರಿ ದಿನವೇ ಕ್ರಯದ ಪ್ರತಿಫಲ ಎಷ್ಟು ಎಂದು ನಿಗದಿಯಾಗಿತ್ತು. ಸದರಿ ದಿನವೇ ಕ್ರಯ ಪತ್ರ ಮಾಡಿಕೊಳ್ಳಲು ಯಾವುದೇ ಅಡಚಣೆ ಇರಲಿಲ್ಲ.

2) ನಾನು ವಿಜಯ ಟ್ರೇಂಡಿಂಗ್ ಕಂಪನಿಯ ಹೆಸರನಲ್ಲಿ ಕೋಳಿ ಮೊಟ್ಟೆ ಮತ್ತು ಮೆಕ್ಕೆ ಜೋಳವನ್ನು ಖರೀದಿ ಮಾಡುವ ಮತ್ತು ಮಾರಾಟ ಮಾಡುವ ವ್ಯವಹಾರ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗುಜರಿ ವ್ಯವಹಾರ ಮಾಡುತ್ತೇನೆ. ಪ್ರತಿವಾದಿ ಎಂ.ಎ ಟ್ರೇಡರ್ಸ್ ಕಂಪನಿಯ ಹೆಸರನಲ್ಲಿ ಕೋಳಿ ಮೊಟ್ಟೆ ಮತ್ತು ಮೆಕ್ಕೆ ಜೋಳವನ್ನು ಖರೀದಿ ಮಾಡುವ ಮತ್ತು ಮಾರಾಟ ಮಾಡುವ ವ್ಯವಹಾರ ಮಾಡುತ್ತಿದ್ದಾರೆ ಎಂದರೆ ಸರಿ. ನಾನು ಕರಾರಿನಲ್ಲಿ ನಮೂದಿಸಿರುವ ಹಣ ವರ್ಗಾವಣೆ ವ್ಯವಹಾರ ಬ್ಯಾಂಕ್ ಖಾತೆಗಳ ಮೂಲಕ ಮಾಡಿರುತ್ತೇನೆ. ಸದರಿ ಹಣದ ವರ್ಗಾವಣೆಗಳನ್ನು ವಿಜಯ ಟ್ರೇಂಡಿಂಗ್ ಕಂಪನಿಯ ಬ್ಯಾಂಕ್ ಖಾತೆಯ ಮೂಲಕ ಮಾಡಿರುತ್ತೇನೆ. ಸದರಿ ಕಂಪನಿಯ ಬ್ಯಾಂಕ್ ಖಾತೆಯು ಆರ್.ಡಿ.ಸಿ.ಸಿ ಬ್ಯಾಂಕ್, ಕೊಪ್ಪಳ ಹಾಗೂ ಐ.ಡಿ.ಎಫ್.ಸಿ, ಕೊಪ್ಪಳ ಶಾಖೆಯಿಂದ ಮಾಡಿದ್ದೇನೆ. ಅಬ್ದುಲ್ ರಜಕ್ ಖಾತೆಗೆ ಹಣ ವರ್ಗಾವಣೆ ಮಾಡಿದ್ದೇನೆ.

ಆದರೆ ಖಾತೆ ನಂಬ್ರ ಮತ್ತು ಬ್ಯಾಂಕ್ ಹೆಸರು ಗೊತ್ತಿಲ್ಲ. ಹಣ ವರ್ಗಾವಣೆ ಮಾಡಿದ ಸಂಬಂಧ ಯು.ಟಿ.ಆರ್ ಸ್ಲೀಪಿನಲ್ಲಿ ವಿವರ ಇರುತ್ತದೆ ಎಂದರೆ ಸರಿ. ಹಾಗೇ ಬ್ಯಾಂಕ್ ಸ್ಟೇಟ್ಮೆಂಟ್ ನಲ್ಲೂ ಕಾಣುತ್ತದೆ ಎಂದರೆ ಸರಿ.

3) ಪ್ರತಿವಾದಿ ಸಲ್ಲಿಸಿರುವ ಲಿಖಿತ ಹೇಳಿಕೆಯ ಬಗ್ಗೆ ತಿಳಿದುಕೊಂಡಿದ್ದೇನೆ. ನಾನು ಕರಾಮುತ್ತುಲ್ಲಾ ಎಂಬ ಖಾತೆಗೆ ರೂಪಾಯಿ ಇಪ್ಪತ್ತು ಲಕ್ಷವನ್ನು ದಿನಾಂಕ 24-09-2021 ರಂದು ಕಳುಹಿಸಿದ್ದೇನೆ ಎಂದರೆ ಸಾಕ್ಷಿಯು ಅಬ್ದುಲ್ ರಜಕ್ ಕೊಟ್ಟ ಖಾತೆಗೆ ಕಳುಹಿಸಿದ್ದೇನೆ ಎನ್ನುತ್ತಾರೆ. ಸದರಿಯವರು ಯಾರ ಹೆಸರಿನ ಖಾತೆ ವಿವರ ನೀಡಿದ್ದಾರೆ ಎಂದು ಗೊತ್ತಿಲ್ಲ. ರೂ.1,49,400/-ಗಳನ್ನು ದಿನಾಂಕ 27-09-2021 ರಂದು ರೇಣುಕಾ ಫೌಲ್ಟ್ರಿ ಫಾರಂ ಹೆಸರಿಗೆ ಸಂದಾಯವಾಗಿದೆ ಎಂದರೆ ಸಾಕ್ಷಿಯು ಅಬ್ದುಲ್ ರಜಕ್ ಕೊಟ್ಟ ಖಾತೆಗೆ ಕಳುಹಿಸಿದ್ದೇನೆ ಎನ್ನುತ್ತಾರೆ. ರೂ.10,66,965/-ಗಳನ್ನು ದಿನಾಂಕ 27-09-2021 ರಂದು ಬಿ.ಎಸ್.ಆರ್ ಫೌಲ್ಟ್ರಿ ಫಾರಂ ಹೆಸರಿಗೆ ಸಂದಾಯವಾಗಿದೆ ಎಂದರೆ ಸಾಕ್ಷಿಯು ಅಬ್ದುಲ್ ರಜಕ್ ಕೊಟ್ಟ ಖಾತೆಗೆ ಕಳುಹಿಸಿದ್ದೇನೆ ಎನ್ನುತ್ತಾರೆ. ರೂ.5,41,200/- ಗಳನ್ನು ದಿನಾಂಕ 27-09-2021 ರಂದು ಕಲ್ಯಾಣಿ ಫೌಲ್ಟ್ರಿ ಫಾರಂ ಹೆಸರಿಗೆ ಸಂದಾಯವಾಗಿದೆ ಎಂದರೆ ಸಾಕ್ಷಿಯು ಅಬ್ದುಲ್ ರಜಕ್ ಕೊಟ್ಟ ಖಾತೆಗೆ ಕಳುಹಿಸಿದ್ದೇನೆ ಎನ್ನುತ್ತಾರೆ. ರೂ.4,98,000/- ಗಳನ್ನು ದಿನಾಂಕ 28-09-2021 ರಂದು ಎಂ.ಎ ಟ್ರೇಡರ್ಸ್ ಪ್ರತಿವಾದಿ ಫಾರಂ ಹೆಸರಿಗೆ ಸಂದಾಯವಾಗಿದೆ ಎಂದರೆ ಸಾಕ್ಷಿಯು ಅಬ್ದುಲ್ ರಜಕ್ ಕೊಟ್ಟ ಖಾತೆಗೆ ಕಳುಹಿಸಿದ್ದೇನೆ ಎನ್ನುತ್ತಾರೆ. ರೂ.5,71,740/- ಗಳನ್ನು ದಿನಾಂಕ 30-09-2021 ಎಂ.ಆರ್.ಎಂ ಫೌಲ್ಟ್ರಿ ಫಾರಂ ಹೆಸರಿಗೆ ಸಂದಾಯವಾಗಿದೆ ಎಂದರೆ ಸಾಕ್ಷಿಯು ಅಬ್ದುಲ್ ರಜಕ್ ಕೊಟ್ಟ ಖಾತೆಗೆ ಕಳುಹಿಸಿದ್ದೇನೆ ಎನ್ನುತ್ತಾರೆ. ಮೇಲೆ ಹೇಳಿದ ನನ್ನ ಖಾತೆಯಿಂದ ವರ್ಗಾವಣೆಯಾದ ಹಣವು ಯಾರ ಖಾತೆಗೆ ಹೋಗಿದೆ ಎಂದು ಪರಿಶೀಲಿಸಿದ್ದಿರಾ ಎಂದರೆ ಸಾಕ್ಷಿಯು ಅಬ್ದುಲ್ ರಜಕ್ ಕೊಟ್ಟ ಖಾತೆಗೆ ಹಾಕಿದ್ದೇನೆ ಎನ್ನುತ್ತಾರೆ.

4) ಮೇಲೆ ಹೇಳಿದ ವ್ಯಕ್ತಿಗಳ ಮತ್ತು ನನ್ನ ಮಧ್ಯೆ ವ್ಯವಹಾರ ಇದೆ ಎಂದರೆ ಸರಿಯಲ್ಲ. ಸದರಿ ನಮ್ಮ ಖಾತೆಯಿಂದ ಮೇಲಿನ ಕಂಪನಿಗಳಿಗೆ ಸಂದಾಯವಾದ ಹಣವನ್ನು ವಾಪಾಸ್ಸು ಪಡೆಯಲು ಕ್ರಮ

ವಹಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನನ್ನ ನಿರ್ದೇಶನದ ಮೇರೆಗೆ ಪ್ರತಿವಾದಿಯು ಅವರಿಗೆ ಖಾತೆಗೆ ಸಂದಾಯವಾದ ರೂ.4,98,000/- ಗಳ ಬಾಬ್ತು ಗೋಲ್ಡನ್ ಯಗ್ ಕಂಪನಿಗೆ ಕೋಳಿ ಮೊಟ್ಟೆ ಸರಬರಾಜು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕರಾರು ಮಾಡಿಕೊಳ್ಳಲು ಸಂದರ್ಭದಲ್ಲಿ ನಾನು ಸಂದಾಯ ಮಾಡಿದ ಹಣ ಯಾರ ಖಾತೆಗೆ ಹೋಗಿದೆ ಎಂದು ಖಾತರಿ ಮಾಡಿಕೊಂಡಿಲ್ಲ. ಕರಾರಿನಲ್ಲಿ ಕಾಣಿಸಿದ ಹಣ ನಾನು ಹಣವನ್ನು ಕಳುಹಿಸಿದ ವ್ಯಕ್ತಿಗಳಿಂದ ವಸೂಲಿ ಮಾಡಿಕೊಳ್ಳಿ ಎಂದು ಹೇಳಿ ಕರಾರಿಗೆ ಪ್ರತಿವಾದಿಯ ಸಹಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ರೂ.4,98,000/- ಸಂದಾಯವಾಗಿರುವುದನ್ನು ಹೊರತುಪಡಿಸಿ ಬೇರೆ ಯಾವುದೇ ಹಣ ಅವರಿಗೆ ಸಂದಾಯವಾಗಿಲ್ಲ ಎಂದರೆ ಸಾಕ್ಷಿಯು ಅವರು ಹೇಳಿದ ಖಾತೆಗೆ ಹಣ ಹಾಕಿದ್ದೇನೆ ಎನ್ನುತ್ತಾರೆ. ಕರಾರು ಆದ ದಿನವು ಸಹ ದಾವಾ ಸ್ವತ್ತನ್ನು ನೊಂದಣಿ ಮಾಡಿಕೊಳ್ಳಲು ಅಡೆತಡೆ ಇರಲಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯೇ ಸಮಯ ಕೇಳಿದ್ದರು ಎನ್ನುತ್ತಾರೆ. ಪ್ರತಿವಾದಿಯೇ ಸಮಯ ಕೇಳಿದ ಬಗ್ಗೆ ನಿ.ಪಿ -1 ರ ಕರಾರಿನಲ್ಲಿ ನಮೂದಿಲ್ಲ. ನಿ.ಪಿ - 2 ಮತ್ತು 3 ದಾಖಲೆಗಳು ನಿ.ಪಿ - 1 ಆದ ದಿನವೇ ಸಿದ್ಧವಿತ್ತು ಎಂದರೆ ಸರಿ. ನಿ.ಪಿ - 7 ಮತ್ತು 8 ನ್ನು ಪಂಚಾಯಿತಿ ಕಚೇರಿಯಿಂದ ಸಾಕ್ಷಿ ಕೊಡುವ ಸ್ವಲ್ಪ ಮುಂಚೆ ದಿನಾಂಕ 15-03-2023 ರಂದು ಪಡೆದುಕೊಂಡಿದ್ದೇನೆ ಎಂದರೆ ಸರಿ. ನಿ.ಪಿ - 2 ಮತ್ತು 3 ಹಾಗೂ ನಿ.ಪಿ - 7 ಮತ್ತು 8 ಕ್ಕೆ ಯಾವುದೇ ವ್ಯತ್ಯಾಸವಿಲ್ಲ ಎಂದರೆ ಸರಿ. ನಾನು ಸಕಾರಣವಿಲ್ಲದೇ ಕರಾರಿನ ಅನುಷ್ಠಾನಕ್ಕಾಗಿ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ನಾನು ಕೋರಿದಂತೆ ದಾವಾ ಸ್ವತ್ತನ್ನು ಮಾರಾಟ ಮಾಡಲು ಬದ್ಧರಲ್ಲ ಎಂದರೆ ಸರಿಯಲ್ಲ. ನನ್ನ ಬ್ಯಾಂಕ್ ಖಾತೆಯ ಪುಸ್ತಕ ಹಾಜರುಪಡಿಸಲು ತೊಂದರೆ ಇಲ್ಲ.

**<u>ಮರು ವಿಚಾರಣೆ:</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**